


# ವಲಸೆ ಹಕ್ಕಿ

ದೂರದೂರಿನಿಂದ
ಹಾರಿಬಂತು ಒಂಟಿ ಹಕ್ಕಿ
ಹಳೆ ಊರಿನ ನೆನಪ ಹೊತ್ತು
ಸಾಗಿಬಂತು ವಲಸೆ ಹಕ್ಕಿ

ಕಾಡುಮೇಡು ಬೆಟ್ಟ ಗುಡ್ಡ
ಸುತ್ತಿಸುತ್ತಿ ಸುಳಿದುಬಂತು
ನದಿಸಾಗರ ಕೆರೆತೊರೆಯ
ಮೇಗಡೆಯಲಿ ಸಾಗಿಬಂತು

ಮೋಡಗಳ ರಾಶಿ ಸೀಳಿ
ಹತ್ತಿಯಂತೆ ತೇಲಿಬಂತು
ಪಟಪಟನೆ ರೆಕ್ಕೆಬಡಿದು
ತನ್ನ ಗಮ್ಯ ತಲುಪಿತು

ಪುಟ್ಟದೊಂದು ಗೂಡು ಕಟ್ಟಿ
ಬದುಕು ನಡೆಸತೊಡಗಿತು
ಅಲ್ಲಿ ಇಲ್ಲಿ ಅಲೆದು ಹುಡುಕಿ
ಕಾಳುಕಡ್ಡಿ ತಿಂದಿತು

ದಿನಗಳುರುಳಿ ಕಾಲ ಓಡಿ
ಹಕ್ಕಿ ಮಾಗುತ್ತಿದ್ದಿತು
ಜಾಗ, ಗೂಡು ಎಲ್ಲಾ ಅದಕೆ
ಸಪ್ಪೆ ಸಪ್ಪೆ ಎನಿಸಿತು

ಸ್ವಂತ ಊರು ನೆನೆಸಿಕೊಂಡು
ಕೊರಗಿ ಕೊರಗಿ ನರಳಿತು
ಬಂಧು ಬಳಗ ನೆನೆದು ನೆನೆದು
ಬಿಕ್ಕಿ ಬಿಕ್ಕಿ ಅತ್ತಿತು

ಬಂದ ದಾರಿ ಹಿಡಿದು ಮತ್ತೆ
ತನ್ನ ಊರು ತಲುಪಿತು
ನೆಲವ ತುಳಿದು ಗಾಳಿ ಮೂಸಿ
ಇದುವೇ ಶ್ರೇಷ್ಠ ಎಂದಿತು!

**ಡಾ. ಕೆ.ಬಿ. ರಂಗಸ್ವಾಮಿ**
ಚಿತ್ರ: ಶ್ರೀಕೃಷ್ಣ ಕೆದಿಲಾಯ

## ಕುಂಚ ಪ್ರಪಂಚ



**ಧನ್ವಿ ಗೌಡ**
4ನೇ ತರಗತಿ, ದಿ ರೆಜೆನ್ಸಿ ಪಬ್ಲಿಕ್ ಸ್ಕೂಲ್, ಬೆಂಗಳೂರು

